# ಡಬಲ್ ಡೆಕರ್ ಯೋಜನೆಯಿಂದ ಸಾರ್ವಜನಿಕ ಸಾರಿಗೆಗೆ ಕುತ್ತು - ವರದಿ

ಪ್ರಜಾವಾಣಿ ವಾರ್ತೆ

Published : 30 ಜೂನ್ 2026, 6:23 IST | Last Updated : 30 ಜೂನ್ 2026, 6:23 IST

ಫಾಲೋ ಮಾಡಿ 0




ಎಚ್‌ಎಸ್‌ಆರ್ ಲೇಔಟ್‌ನಿಂದ ರಾಗಿಗುಡ್ಡ ಕಡೆಗೆ ಡಬಲ್ ಡೆಕರ್ ಮೇಲ್ಸೇತುವೆ

ಬೆಂಗಳೂರು: ಡಬಲ್ ಡೆಕರ್ ಯೋಜನೆಯಿಂದಾಗಿ 2041ರ ಹೊತ್ತಿಗೆ ಕಾರು, ಆಟೊ, ದ್ವಿಚಕ್ರ ವಾಹನಗಳ ಬಳಕೆ ಹೆಚ್ಚಾಗಲಿದ್ದು, ಮೆಟ್ರೊ,ಬಸ್, ಉಪನಗರ ರೈಲು ಸೇರಿದಂತೆ ಸಾರ್ವಜನಿಕ ಸಾರಿಗೆಯಲ್ಲಿ ಸಂಚರಿಸು ವವರ ಸಂಖ್ಯೆ ಕಡಿಮೆಯಾಗಲಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಯಾವಾಗಲಾದರೂ ಎಲ್ಲಿಯಾದರೂ
ಇಂದೇ ಹೆಚ್ಚು ಪರಿಷ್ಕೃತವಾಗಿರುವ ಇ-ಪೇಪರ್ ನ ಅನುಭವ ಪಡೆಯಿರಿ
ಈಗಲೇ ಚಂದಾದಾರರಾಗಿ
ADVERTISEMENT

ಐಐಎಸ್‌ಸಿಯ ಸುಸ್ಥಿರ ಸಾರಿಗೆ ಪ್ರಯೋಗಾಲಯದ ಆಶಿಶ್ ವರ್ಮಾ ನೇತೃತ್ವದಲ್ಲಿ ‘ಬೆಂಗಳೂರಿನ ಚಲನಶೀಲತೆ ಮತ್ತು ಪರಿಸರದ ಮೇಲೆ ಮೆಟ್ರೊ ಡಬಲ್-ಡೆಕರ್ ಮತ್ತು ಎತ್ತರಿಸಿದ ಕಾರಿಡಾರ್‌ಗಳ ಪರಿಣಾಮಗಳು’ ಎಂಬ ಅಧ್ಯಯನ ನಡೆಸಲಾಗಿತ್ತು. ಮೆಟ್ರೊ ಹಂತ-3 ಕಾರಿಡಾರ್‌ಗಳೊಂದಿಗೆ ಎತ್ತರಿಸಿದ ರಸ್ತೆಗಳನ್ನು ಸಂಯೋಜಿಸುವು ದರಿಂದ ಮೆಟ್ರೊ ಪ್ರಯಾಣಿಕರ ಸಂಖ್ಯೆ ಕಡಿಮೆಯಾಗಲಿದೆ. ಇಂಧನ ಬಳಕೆ ಮತ್ತು ಯೋಜನಾ ವೆಚ್ಚಗಳು ಹೆಚ್ಚಾಗಲಿವೆ’ ಎಂದು ಅಧ್ಯಯನದ ವರದಿ ತಿಳಿಸಿದೆ.

ಹೆಚ್ಚುವರಿ ರಸ್ತೆ ಸಾಮರ್ಥ್ಯವು ಪ್ರಯಾಣಿಕರನ್ನು ಸಾರ್ವಜನಿಕ ಸಾರಿಗೆಯಿಂದ ಖಾಸಗಿ ವಾಹನಗಳತ್ತ ಮುಖಮಾಡುವಂತೆ ಪ್ರೇರೇಪಿಸುತ್ತದೆ,ಇದು ಸಾರ್ವಜನಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆಗಳ ಉದ್ದೇಶಗಳಿಗೆ ತದ್ವಿರುದ್ಧವಾಗಲಿದೆ.

ಮೂರನೇ ಹಂತದಲ್ಲಿ ಜೆ.ಪಿ.ನಗರ 4ನೇ ಹಂತದಿಂದ ಹೆಬ್ಬಾಳವರೆಗೆ ಹಾಗೂ ಹೊಸಹಳ್ಳಿಯಿಂದ ಕಡಬಗೆರೆ ವರೆಗೆ ಮೆಟ್ರೊ ಮಾರ್ಗ ನಿರ್ಮಾಣಗೊಳ್ಳಲಿದೆ. ಅಲ್ಲದೇ ರಾಗಿಗುಡ್ಡದಿಂದ– ರೇಷ್ಮೆ ಮಂಡಳಿ (ಈಗಾಗಲೇ ಆಗಿದೆ) ಸರ್ಜಾಪುರದಿಂದ ಇಬ್ಬಲೂರು, ಅಗರದಿಂದ ಕೋರಮಂಗಲ ನಡುವೆ ಡಬಲ್ ಡೆಕರ್ ನಿರ್ಮಾಣಗೊಳ್ಳಲಿದೆ.ಮೂರನೇ ಹಂತದ ಮೆಟ್ರೊದಲ್ಲಿ 8.09 ಲಕ್ಷ ಪ್ರಯಾಣಿಕರು ನಿತ್ಯ ಸಂಚರಿಸಬಹುದು ಎಂಬ ನಿರೀಕ್ಷೆ ಇದೆ. ಆದರೆ, ಡಬಲ್ ಡೆಕರ್ ನಿರ್ಮಿಸಿದರೆ, ನಿತ್ಯ ಸಂಚರಿಸುವವರ ಸಂಖ್ಯೆ ಕನಿಷ್ಠ 10 ಸಾವಿರ ಕಡಿಮೆಯಾಗಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

3ನೇ ಹಂತದ ಯೋಜನೆಗೆ ಕೇಂದ್ರ ಸರ್ಕಾರ 2024ರಲ್ಲಿ ಅನುಮೋದನೆ ನೀಡುವಾಗ ಡಬಲ್ ಡೆಕರ್ ಸೇರಿರಲಿಲ್ಲ. ಆಗ ಆರ್ಥಿಕ ಆಂತರಿಕ ಲಾಭದ ದರವು (ಇಐಆರ್‌ಆರ್) ಶೇ 9.07 ಎಂದು ಹೇಳಲಾಗಿತ್ತು. ಡಬಲ್ ಡೆಕರ್ ಸೇರಿದ ಮೇಲೆ ಈ ದರವು ಶೇ 5.43ಕ್ಕೆ ಇಳಿದಿದೆ. ಡಬಲ್ ಡೆಕರ್‌ನಿಂದಾಗಿ ಇಂಧನ ಬಳಕೆಯು ದಿನಕ್ಕೆ 7,000 ಲೀಟರ್ ಹೆಚ್ಚಾಗುವ ಸಾಧ್ಯತೆ ಇದೆ ಎಂದು ವರದಿಯಲ್ಲಿದೆ.

ಪ್ರಸ್ತಾವಿತ ಡಬಲ್-ಡೆಕರ್ ಕಾರಿಡಾರ್‌ಗಳು ಪ್ರತಿದಿನ ಹೆಚ್ಚುವರಿಯಾಗಿ 85.9 ಕೆ.ಜಿ ಕಾರ್ಬನ್ ಮಾನಾಕ್ಸೈಡ್, 12.6 ಕೆ.ಜಿ ಸಾರಜನಕದ ಆಕ್ಸೈಡ್, 19.5 ಕೆ.ಜಿ ಹೈಡ್ರೋಕಾರ್ಬನ್ ಮತ್ತು 1.1 ಕೆ.ಜಿ ಪಿಎಂ 2.5 ಹೊರಸೂಸಲಿವೆ. ಜೊತೆಗೆ ಪ್ರತಿದಿನ 17,012 ಕೆ.ಜಿ ಕಾರ್ಬನ್ ಡೈಆಕ್ಸೈಡ್ (ಹೊಗೆ) ಉತ್ಪಾದನೆಯಾಗಲಿದೆ ಎಂದು ವರದಿ ಅಂದಾಜಿಸಿದೆ.

*ಮೂಲತಃ ಪ್ರಜಾವಾಣಿ ಮುದ್ರಣ ಆವೃತ್ತಿಯಿಂದ ಇದನ್ನು ಪಡೆಯಲಾಗಿದೆ. ಎಐ ನೆರವಿನ ವರ್ಗೀಕರಣದಿಂದಾಗಿ ವಿಭಾಗ ಮತ್ತು ಬಳಸಿರುವ ಪ್ರಾತಿನಿಧಿಕ ಚಿತ್ರ ತಪ್ಪಾಗಿರಬಹುದು. ಸುದ್ದಿಯ ವಿಷಯದಲ್ಲಿ ಯಾವುದೇ ಬದಲಾವಣೆ ಇಲ್ಲ*

260630-4-509062266